# ಅಮ್ಮ ಗೊತ್ತಾ ನಿಂಗೆ..



ಅಮ್ಮ ನನಗೆ ವಯಸ್ಸು ಎಷ್ಟು
ಅಂತ ಗೊತ್ತಾ ನಿಂಗೆ
ಒಂದು ವರ್ಷ ಕಳೆದು ಹೋಯ್ತು
ಕಳಿಸ್ತಿ ಸ್ಕೂಲ್ಗೆ ಈಗ್ಲೆ

ಅಮ್ಮ ನನಗೆ ಹಲ್ಲು ಎಷ್ಟು
ಅಂತ ಗೊತ್ತಾ ನಿಂಗೆ
ಎರೆಡು ಹಲ್ಲು ಬಂದಾಯ್ತು
ತಿನಿಸ್ತಿ ಕಡ್ಲೆ ನಾಳ್ಗೆ

ಅಮ್ಮ ನಂಗೆ ಮ್ಯಾಮ್ ಎಷ್ಟು
ಅಂತ ಗೊತಾ ನಿಂಗೆ
ಮೂರು ಮಂದಿ ಸಾಲಾಗಿ ನಿಂತು
ವೆಲ್ ಕಂ ಅಂತಾರೆ ಸ್ಕೂಲ್ಗೆ

ಅಮ್ಮ ಏಳುವ ಸಮಯ ಎಷ್ಟು
ಅಂತ ಗೊತ್ತಾ ನಿಂಗೆ
ಐದು ಗಂಟೆಗೆ ಅಲಾರ್ಮ್ ಇಟ್ಟು
ಎಬ್ಬಿಸಿ ಬಿಡ್ತಿ ಬೇಗ್ನೆ

ಅಮ್ಮ ಹೋಮ್ ವರ್ಕ ಎಷ್ಟು
ಅಂತ ಗೊತ್ತಾ ನಿಂಗೆ
ಆರು ಪೇಜು ಬರೆದು ಸೋತೆ
ಬಾಲನ್ಸ್ ಇರಲಿ ನಾಳ್ಗೆ

ಅಮ್ಮ ನಂಗೆ ಫ್ರೆಂಡ್ಸ್ ಎಷ್ಟು
ಅಂತ ಗೊತ್ತಾ ನಿಂಗೆ
ಏಳು ಎಂಟು ಬಹಳ ಮಂದಿ
ಆಡೋರು ಯಾರಿಲ್ಲ ನಂಗೆ

ಅಮ್ಮ ನಿದ್ದೆ ವೇಳೆ ಎಷ್ಟು
ಅಂತ ಗೊತ್ತಾ ನಿನಗೆ
ಒಂಬತ್ತು ಆದರೂ ಮಲಗಂಗಿಲ್ಲ
ಕಣ್ ಎಳೆದರೂ ಸುಮ್ನೆ

ಅಮ್ಮ ಜೋ ಜೋ ಲಾಲಿ ಏನು
ಅಂತ ಗೊತ್ತಾ ನಿಂಗೆ
ಹತ್ತು ಆಯ್ತು ಮೊಬೈಲ್ ರಿಂಗ್
ಫೋನಲಿ ಮಾತಾಡ್ತಿ ಹಂಗೆ

ಅಮ್ಮ ಕಲಿತ ಮಗ್ಗಿ ಎಷ್ಟು
ಅಂತ ಗೊತಾ ನಿಂಗೆ
ಮನೆಯೇ ಮೊದಲ ಪಾಠ ಶಾಲೆ
ಒಂದರಿಂದ ಹತ್ತು ಹಿಂಗೆ

**-ಲಲಿತಾ ಕೆ.ಹೊಸಪ್ಯಾಟಿ**

# ಸೋಲೊಪ್ಪದ ಸಂತ

ಬಹಳ ಹಿಂದೆ ಚೀನಾ ದೇಶದಲ್ಲಿ ಸಂತ ಕಂಪ್ಯೂತ್ಸೆ ಒಂದು ದಿನ ದಟ್ಟವಾದ ಅರಣ್ಯವೊಂದರಲ್ಲಿ ಹೋಗುತ್ತಿದ್ದನು. ಓರ್ವ ಸ್ತ್ರೀ ಅಳುತ್ತಾ ಕುಳಿತಿರುವುದನ್ನು ಕಂಡು ಆತ ಅವಳ ಬಳಿಗೆ ಹೋಗಿ, 'ಸಹೋದರಿ, ನೀನು ಏಕೆ ಅಳುತ್ತಿರುವೆ?'ಎಂದು ಕೇಳಿದ.

ಆಕೆ 'ಒಂದು ಚಿರತೆ ಇಲ್ಲಿ ಬಹಳ ಕಾಟ ಕೊಡುತ್ತಿದೆ. ಅದು ಮೊದಲು ನನ್ನ ಗಂಡನನ್ನು ಕೊಂದು ಹಾಕಿತು. ನಂತರ ನನ್ನ ಮಗನನ್ನು ತಿಂದಿತು' ಎಂದಳು.

ಕಂಪ್ಯೂತ್ಸೆ 'ನೀನು ಪಟ್ಟಣಕ್ಕೆ ಏಕೆ ಹೋಗಬಾರದು?' ಎಂದು ಕೇಳಿದ. ಆಗ ಆ ಸ್ತ್ರೀ 'ಸಹೋದರನೇ, ಇಲ್ಲಿ ಒಂದು ಚಿರತೆ ಮಾತ್ರ ಇದ್ದರೆ, ಪಟ್ಟಣದಲ್ಲಿ ಅನೇಕ ಭ್ರಷ್ಟ ನೌಕರರಿದ್ದಾರೆ. ಅವರೆಲ್ಲ ಚಿರತೆಯಂತೆಯೇ ಬಹಳ ಕ್ರೂರಿಗಳು. ನಾನು ಒಂದು ಚಿರತೆಯಿಂದ ನನ್ನ ರಕ್ಷಣೆಯನ್ನು ಮಾಡಿಕೊಳ್ಳಬಲ್ಲೆ. ಆದರೆ ಭ್ರಷ್ಟರೆಂಬ ಅಸಂಖ್ಯ ಚಿರತೆಗಳಿಂದ ನಾನು ಉಳಿಯಲು ಸಾಧ್ಯವಿಲ್ಲ' ಎಂದು ಅಳಲು ತೋಡಿಕೊಂಡಳು.

ಕಂಪ್ಯೂತ್ಸೆಯ ಹತ್ತಿರ ಇದಕ್ಕೆ ಯಾವುದೇ ಉತ್ತರವಿರಲಿಲ್ಲ. ಹಳ್ಳಿಯ ಹೆಣ್ಣುಮಗಳ ಮಾತು ಅವನಿಗೆ ಬಾಣದಂತೆ ಚುಚ್ಚಿತು. ನೌಕರರ ನಡವಳಿಕೆ ಸುಧಾರಿಸುವ ದಿಶೆಯಲ್ಲಿ ಪ್ರಯತ್ನಿಸಬೇಕೆಂದು ನಿಶ್ಚಯಿಸಿದ.

ಅರಸನ ಓಲಗಕ್ಕೆ ಹೋದ ಕಂಪ್ಯೂತ್ಸೆ, 'ಶತ್ರುಗಳ ಸೈನ್ಯಕ್ಕಿಂತಲೂ ಕೆಟ್ಟ ಸರ್ಕಾರ ನಮ್ಮ ದೇಶದ ಶತ್ರು. ಪ್ರಜೆಗಳಿಗೆ ಕಲ್ಯಾಣವಾಗುವಂತಹ ಸರ್ಕಾರದ ರಚನೆಯಾಗಬೇಕು' ಎಂದು ಕೇಳಿಕೊಂಡ.

ಅರಸನು ಸಂತನ ಮಾತನ್ನು ಮನಸ್ಸುಗೊಟ್ಟು ಕೇಳಿದ. ಬಳಿಕ ಆತ, 'ನಾನು ನಿಮಗೆ ಒಂದು ಪಟ್ಟಣದ ಸರ್ಕಾರವನ್ನೇ ಒಪ್ಪಿಸುವೆ. ತಾವು ಸರಿಯಾದ ರೀತಿಯಿಂದ ಅಲ್ಲಿಯ ಸರಕಾರ ನಡೆಸಿರಿ' ಎಂದು ಹೇಳಿದ.

ಈ ಕೆಲಸದಲ್ಲಿ ಕಂಪ್ಯೂತ್ಸೆ ಬಹಳ ಯಶಸ್ವಿಯಾದ. ಅರಸನು ಅವನನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದ. ಆದರೆ ಇದರಿಂದ



ಉಳಿದ ಮಂತ್ರಿಗಳಿಗೆ, ಜಹಗೀರದಾರರಿಗೆ ಹೊಟ್ಟೆಕಿಚ್ಚಾಯಿತು. ಅವರು ಅನೇಕ ರೀತಿಗಳಿಂದ ತೊಂದರೆಗಳನ್ನು ತಂದೊಡ್ಡಿದರು. ಪ್ರಧಾನ ಮಂತ್ರಿಯ ವಿರುದ್ಧ ಬಂಡೆದ್ದರು. ಇದರಿಂದ ಕಂಪ್ಯೂತ್ಸೆ ನಿರಾಶನಾಗಲಿಲ್ಲ. ಅಂಜಲೂ ಇಲ್ಲ. ಅವನು ರಾಜ್ಯವನ್ನು ಬಿಟ್ಟ. ಅನೇಕ ವರ್ಷಗಳ ಕಾಲ ದೇಶಾದ್ಯಂತ ಸುತ್ತಾಡಿ ಪ್ರಜೆಗಳಿಗೆ ತನ್ನ ವಿಚಾರಗಳನ್ನು ಹೇಳತೊಡಗಿದ.

ಸಾವಿರಾರು ಸಂಖ್ಯೆಯಲ್ಲಿ ಜನರು ಸಂತ ಕಂಪ್ಯೂತ್ಸೆಯ ಶಿಷ್ಯರಾದರು. ಅವನಿಗೆ 'ಕಂಪ್ಯೂಶಿಯಸ್' ಅಂದರೆ 'ಬುದ್ದಿವಂತ ಸಂತ' ಎಂದು ಕರೆಯತೊಡಗಿದರು.

ಕಂಪ್ಯೂತ್ಸೆ ಅಥವಾ ಕಂಪ್ಯೂಶಿಯಸ್ ಕೊನೆಯುಸಿರೆಳೆದು ನೂರಾರು ವರ್ಷಗಳು ಕಳೆದು ಹೋಗಿವೆ. ಇಂದು ಚೀನಾದಲ್ಲಿ ಅವನನ್ನು ದೇವತೆ ಎಂದು ಪೂಜಿಸುತ್ತಾರೆ. ಕಂಪ್ಯೂತ್ಸೆ ಮೂರು ವರ್ಷದವನಿದ್ದಾಗ ತಂದೆ ತೀರಿ ಹೋದರು. ಬಡ ತಾಯಿಗೆ ಸರಿಯಾದ ಶಿಕ್ಷಣವನ್ನು ಕೊಡಿಸುವುದು ಸಾಧ್ಯವಾಗಲಿಲ್ಲ. ಆದರೆ ಆ ಬಾಲಕನೇ ದೊಡ್ಡವನಾಗಿ ಚೀನಾದ ಜನತೆಗೆ ಶಿಕ್ಷಣವನ್ನಿತ್ತ. ಜೀವನದಲ್ಲಿ ಕಷ್ಟವನ್ನು ಉಂಡವರು ಬಹಳ ಸಾಧನೆ ಮಾಡುತ್ತಾರೆ ಎಂಬುದಕ್ಕೆ ಕಂಪ್ಯೂತ್ಸೆಯೇ ಸಾಕ್ಷಿ.

(ಚೀನಾ ದೇಶದ ಜಾನಪದ ಕಥೆ)

**- ಬಿ. ಹನುಮಂತ ಭಟ್**